# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)** **ಮೈಸೂರು**

ಸಂಪುಟ 1 ಸಂಚಿಕೆ 4
Volume 1 Issue 4
ಮಂಗಳವಾರ 22-09-2015
Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444

ಮೈಸೂರು
ಪುಟ 4
ಬೆಲೆ ₹2

## ಕಳಸಾ ಬಂಡೂರಿ ಯೋಜನೆಗಾಗಿ ಚಿತ್ರರಂಗದ ನಟಿಯರು ಸಾಥ್

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಬಿ. ಸರೋಜಾದೇವಿ, ಭಾರತಿ, ವಿಷ್ಣುವರ್ಧನ್, ಜಯಮಾಲಾ, ಪ್ರಮೀಳಾ ಜೋಷಾಯ್, ಹೇಮಾ ಚೌಧುರಿ, ವಿಜಯಲಕ್ಷ್ಮೀಸಿಂಗ್, ತಾರಾ, ಶ್ರುತಿ, ಅನುಪ್ರಭಾಕರ್, ಪೂಜಾಗಾಂಧಿ, ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಕಳಸಾ ಬಂಡೂರಿ ಯೋಜನೆ ಜಾರಿಗಾಗಿ ಸಹಕಾರವನ್ನು ನೀಡಿದರು.



ಉ.ಕ. ದಲ್ಲಿ ನಡೆಯುತ್ತಿರುವ ಕಳಸಾ ಬಂಡೂರಿ ನಾಲಾ ಯೋಜನೆ ಅನುಷ್ಠಾನದ ಹೋರಾಟಕ್ಕೆ ಚಿತ್ರರಂಗದ ತಂಡ ಬೆಂಬಲ ನೀಡಲು ಹುಬ್ಬಳ್ಳಿಗೆ ಆಗಮಿಸಿದೆ. ನಾಡಿನ ಅನ್ನದಾತರ ಬೆಂಬಲಕ್ಕೆ ನಾವೂ ಯಾವಾಗಲೂ ಇರುತ್ತೇವೆ ಎಂದು ಚಿತ್ರನಟಿ ಜಯಮಾಲಾ ತಿಳಿಸಿದರು.



ರೈತರು ನಡೆಸುತ್ತಿರುವ ಈ ಹೋರಾಟ ನ್ಯಾಯ ಸಮ್ಮತವಾಗಿದೆ. ಉ.ಕ. ಭಾಗದ ರೈತರು ನಿಜ ವಾಗಲೂ ಸಂಕಷ್ಟ ದಲ್ಲಿದ್ದಾರೆ. ರೈತರ ಈ ಹೋರಾಟಕ್ಕೆ ಇಡೀ ಚಿತ್ರರಂಗವೇ ಬೆಂಬಲಕ್ಕಿದೆ ಎಂದು ಹಿರಿಯ ನಟಿಯಾದ ಬಿ. ಸರೋಜಾದೇವಿ ತಿಳಿಸಿದರು.



ಈ ಹೋರಾಟವನ್ನು ಎಲ್ಲ ಪಕ್ಷದವರು ಪಕ್ಷಭೇದ ಮರೆತು ಕೈ ಜೋಡಿಸಿದಲ್ಲಿ ಮಾತ್ರಾ ಈ ಯೋಜನೆ ಜಾರಿಗೆ ತರಲು ಸಾಧ್ಯವೆಂದು ಅಲ್ಲದೆ ಚಿತ್ರರಂಗದ ಬೆಂಬಲ ಸಂಪೂರ್ಣವಾಗಿರುತ್ತೆಂದು ಚಿತ್ರನಟಿ ತಾರಾ ತಿಳಿಸಿದರು.

ಇದಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಮಹಾರಾಷ್ಟ್ರ, ಗೋವಾ ಸರ್ಕಾರಗಳು ವಸ್ತು ಸ್ಥಿತಿ ಅರಿತು ರೈತರ ಕೂಗಿಗೆ ಸಹಕಾರ ಕೊಡಬೇಕು ಎಂಬುದೇ ಸಾಮಾನ್ಯ ಜನರ ಅಭಿಪ್ರಾಯವಾಗಿದೆ.

## ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಲು ಅವಕಾಶ



ಪ್ರತಿ ವರ್ಷದಂತೆ ಈ ಸಾರಿಯೂ ದಿನಾಂಕ 14.10.2015ರವರೆಗೆ ಮೈಸೂರಿನ ಜಿಲ್ಲಾದ್ಯಂತ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ನಡೆಯಲಿದೆ. 18ವರ್ಷ ಪೂರೈಸಿದವರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ ಮತದಾರರ ಪಟ್ಟಿಗೆ ಹೆಸರನ್ನು ಸೇರಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿದೆ.

ಮೈಸೂರಿನ ಜಿಲ್ಲೆಯಲ್ಲಿರುವ 11ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಯ ತಾಲ್ಲೂಕು ಕೇಂದ್ರಗಳಲ್ಲಿ ತಹಶಿಲ್ದಾರ್ ಕಛೇರಿಯನ್ನು ಹಾಗೂ ಮೈಸೂರು ನಗರದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ವಲಯ ಕಛೇರಿಗಳಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಏನಾದರೂ ಮಾರ್ಪಾಡು ಮಾಡಿಕೊಳ್ಳಬೇಕಿದ್ದಲ್ಲಿ ಸಂಬಂಧಿಸಿದ ಕಛೇರಿಯನ್ನು ಸಂಪರ್ಕಿಸುವುದು.

ಹೊಸದಾಗಿ ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಹೆಸರನ್ನು ಸೇರಿಲು ಇಚ್ಛೆ ಪಡುವವರು ಸಂಬಂಧಪಟ್ಟ ಕಛೇರಿಗೆ ಭೇಟಿ ನೀಡಿ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು 14.10.2015ರೊಳಗೆ ಸಲ್ಲಿಸಲು ಅವಕಾಶ ಕಲ್ಪಿಸಿದೆಯೆಂದು ಮೈಸೂರು ಜಿಲ್ಲಾಧಿಕಾರಿ ಸಿ. ಶಿಖಾರವರು ತಿಳಿಸಿದ್ದಾರೆ.

## ಮಶ್ರೂಮ್ಸ್ ಪದ್ಯದ ಉಪನ್ಯಾಸ

ಮಹಿಳಾ ಪರ ಚಿಂತನೆ ಮೇರು ಪದ್ಯ ಮಶ್ರೂಮ್ಸ್ ಎಂಬ ವಿಚಾರದ ಬಗ್ಗೆ ವಿಶೇಷ ಉಪನ್ಯಾಸವನ್ನು ಮೈಸೂರಿನ ನಟರಾಜ ಮಹಿಳಾ ವಸತಿ ಕಾಲೇಜಿನ ಆಂಗ್ಲ ವಿಭಾಗದಿಂದ ಇತ್ತೀಚೆಗೆ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಆಂಗ್ಲಭಾಷಾ ಮುಖ್ಯಸ್ಥೆ, ಸಫೀನಾ ಬಾನು, ಸ.ಪ.ಪೂ. ಕಾಲೇಜು ಚಾಮರಾಜನಗರದವರು ಉಪನ್ಯಾಸ ನೀಡಿದರು.

ಮಹಿಳೆಯ ಸ್ವಭಾವ ಹಾಗೂ ಶರೀರದ ಬಗ್ಗೆ ಮನಸ್ಸಿಗೆ ತಾಗುವಂತೆ ಮಾಹಿತಿಯನ್ನು ನೀಡಿ ಈ ಪದ್ಯದಲ್ಲಿ ಪ್ರಕೃತಿ - ಮಹಿಳೆ - ಶರೀರ ಈ ಮೂರರ ಬಗ್ಗೆಯ ಹೋಲಿಕೆಯನ್ನು ಕಾಣಬಹುದು ಎಂದು ತಿಳಿಸುತ್ತಾ ಮಹಿಳೆಯರು ಅದ್ಭುತ ಶಕ್ತಿಯನ್ನು ಹೊಂದಿದ್ದು ಆಕೆ ಹೋರಾಟ ನಡೆಸಲು ಸಾಧ್ಯವೆಂದು ಹಾಗೂ ಮಹಿಳೆಯ ಬಗೆಗಿನ ಇತರೆ ಚಿಂತನೆಗಳು ಈ ಪದ್ಯದಲ್ಲಿ ಒಳಗೊಂಡಿದೆ ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ನಟರಾಜ ಕಾಲೇಜೀನ ಪ್ರಾಂಶುಪಾಲಕಿ ಡಾ ಎಂ. ಶಾರದಾ ವಹಿಸಿದ್ದರು.

## ಹೆಣ್ಣಿಗೆ ಪುರುಷರು ಬೆಂಬಲದಿಂದಿರಲಿ



ಮೈಸೂರು ಕಲಾಮಂದಿರ ಮನೆಯಂಗಳ ಸಭಾಂಗಣದಲ್ಲಿ ಕವನ ಸಂಕಲನವನ್ನು ಬಿಡುಗಡೆ ಮಾಡುವಾಗ ಪುರುಷರು ಹೆಣ್ಣಿಗೆ ಬೆಂಬಲವಾಗಿ ನಿಲ್ಲಲಿ ; ತಾತ್ಸಾರ ಮನೋಭಾವನೆ ತ್ಯಜಿಸಲಿ ಎಂದೂ ಅಲ್ಲದೆ ಮಹಿಳೆ ಬಗ್ಗೆಯ ಕತೆ, ಕವನ, ಕಾದಂಬರಿ, ಹಾಡುಗಳನ್ನು ಬರೆಯುವುದೇ ನಿಜವಾದ ಮಹಿಳಾ ಸಬಲೀಕರಣವೆಂದು ಜಿ.ಪಂ. ಅಧ್ಯಕ್ಷೆ ಪುಷ್ಪಾವತಿ ಅಮರನಾಥ್ ತಿಳಿಸಿದರು.

ಕುವೆಂಪು ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಲೋಲಾಕ್ಷಿಯವರು ಸಂಸ್ಕೃತಿಯಲ್ಲಿ ಸ್ತ್ರೀಯನ್ನು ತಾಯಿಯಂತೆ ನೋಡಿಕೊಂಡಿದೆ. ಈಗಿನ ಪರಿಸ್ಥಿತಿಯಲ್ಲಿ ಹೆಣ್ಣಿಗಾಗುತ್ತಿರುವುದನ್ನು ಎಲ್ಲ ರಂಗಗಳಲ್ಲೂ ತಡೆಯಬೇಕಾದರೆ ಹೆಣ್ಣಿನ ಬಗ್ಗೆ ಹೆಚ್ಚು ಹೆಚ್ಚು ಬರವಣಿಗೆಗಳು ಅತ್ಯವಶ್ಯಕವೆಂದು ತಿಳಿಸಿದರು.

ಬಿಡುಗಡೆ ಸಮಾರಂಭ ಅಚ್ಚುಕಟ್ಟಾಗಿ ಸಿದ್ಧಪಡಿಸಲಾಗಿದ್ದು, ನೆನಪಿನಲ್ಲಿ ಉಳಿಯುವಂತಾಗಿದೆ ಎಂದು ನೆರೆದಿದ್ದವರ ಅಭಿಪ್ರಾಯವಾಗಿದೆ.

## ಯಶೋಧಾಗೆ ಪಿಹೆಚ್‌ಡಿ

ಡಾ ಎನ್. ಸರಸ್ವತಿ ಅವರ ಮಾರ್ಗದರ್ಶನದಲ್ಲಿ ಎನ್. ಯಶೋಧರವರು ಸಂಶೋಧನೆ ನಡೆಸಿ ಮಂಡಿಸಿದ ಡಾ. ಹೆಚ್.ಎಸ್. ದೊರೆಸ್ವಾಮಿಯವರ "ಜೀವನ ಮತ್ತು ಸಾಧನೆಗಳು" ಎಂಬ ಮಹಾಪ್ರಬಂಧವನ್ನು ಮೈಸೂರು ವಿ ವಿ ಇತಿಹಾಸ ವಿಷಯದಲ್ಲಿ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ.

## ಉಮಾಶ್ರೀಯಿಂದ ಪರಿಶೀಲನೆ ಕಾರ್ಯ



ಕಳೆದವಾರ ಏಕಾಏಕಾಯಾಗಿ ದಿಢೀರನೇ ಸಚಿವೆ ಉಮಾಶ್ರೀ ಮಹಿಳಾ ಮತ್ತು ಮಕ್ಕಳ ಸಚಿವಾಲಯಕ್ಕೆ ಭೇಟಿ ಮಾಡಿ ಬಾಕಿ ಕಡತಗಳನ್ನು ವಿಲೇವಾರಿ ಮಾಡಲು ಸೂಚಿಸಿದ್ದ ಮೇರೆಗೆ ಪುನಃ ಎರಡನೇ ಬಾರಿ ಕಛೇರಿಗೆ ಭೇಟಿ ನೀಡಿ ಕಡತ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸಿದರು. ಸಚಿವರ ಎದುರೇ ಹಳೆಯ ಕಡತಗಳನ್ನು ವಿಲೇವಾರಿ ಮಾಡಿದರು. ಸಚಿವರು ದಿಡೀರನೇ ಭೇಟಿ ನೀಡಿದ ಸಮಯದಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗಿದೆ ಎಂದೂ ಹಾಗೆಯೇ ಅಧಿಕಾರಿಗಳಿಗೆ ಇತರೆ ಸೂಚನೆ ಹಾಗೂ ಸಲಹೆಯನ್ನು ನೀಡಿದರು. ಈ ಕಾರ್ಯ ಸಚಿವರಿಂದ ಪ್ರತಿ ಮಾಹೆಯು ನಡೆದಲ್ಲಿ ಬಾಕಿ ಕಡತಗಳಾಗಿ ಕಡತಗಳು ಉಳಿಯಲು ಸಾಧ್ಯವಿಲ್ಲ.

## ಲೀಲಾವತಿಯಿಂದ ಸಿ.ಎಂ.ಗೆ ಮನವಿ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಗೃಹಕಛೇರಿ ಕೃಷ್ಣಾದಲ್ಲಿ ಕಳೆದವಾರ ಜನತಾ ದರ್ಶನವನ್ನು ನಡೆಸಿದರು. ನೆಲಮಂಗಲ ತಾಲ್ಲೋಕ್ ಸೋಲದೇವನ ಹಳ್ಳಿ ಅರಣ್ಯ ಇಲಾಖೆ ಅಧಿಕಾರಿಗಳು ರೈತರಿಗೆ ಕಿರುಕುಳ ನೀಡುತ್ತಿರುವುದನ್ನು ತಪ್ಪಿಸಬೇಕೆಂದು ಹಿರಿಯ ನಟಿ ಲೀಲಾವತಿಯವರು ಸಿ.ಎಂ. ಗೆ ಮನವಿ ಮಾಡಿದರು.



ನೋಡಿ ಯಾರಿಗೆ ಯಾರಿಗೆ ಯಾರಿಗಾಗಿ ಮನವಿ. ನಿಜಕ್ಕೂ ಈ ವಯಸ್ಸಿನಲ್ಲೂ ರೈತರ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ. ಅಲ್ಲದೆ ಜನತಾ ದರ್ಶನದಲ್ಲಿ ಅವರಿಗಾಗಿ ಏನನ್ನೂ ಕೇಳಲಿಲ್ಲ. ಆದರೆ ಕಿರುಕುಳ ಅನುಭವಿಸುತ್ತಿರುವ ರೈತರಿಗಾಗಿ ಮನವಿ ಮಾಡಿಕೊಳ್ಳಲು ತಮ್ಮ ಪುತ್ರ ವಿನೋದ್‌ರಾಜ್ ಜೊತೆ ಬಂದಿದ್ದರು.

**ಬದುಕೇ ಹೀಗೆ !**

**ಕತ್ತಲಿದ್ದಾಗ ಬೆಳಕಿಗಾಗಿ ಹೋರಾಟ....**
**ಬೆಳಕಿದ್ದಾಗ ಕತ್ತಲಿಗಾಗಿ ಹುಡುಕಾಟ..??**

## ನಡೆ - ನುಡಿ

"ಹೌದು, ಸರಿ ಬರೋಬ್ಬರಿ, ಖರೆ, ಸತ್ಯ, ನಿಜ, ಇದು ಸಾಧ್ಯ, ವೆರಿಗುಡ್, ಉತ್ತಮ ಸಲಹೆ ಇತ್ಯಾದಿ ಪದಗಳು ಯಾವಾಗಲೂ ಸಕಾರಾತ್ಮಕ ಪರಿಣಾಮವನ್ನು ಹೊಂದಿರುತ್ತವೆ. "

### ಒಗಟು

"ಎಳೆದರೂ ಎಲೆ, ಕೊಯ್ದರೂ ಎಲೆ,
ಮೈ ಬಟ್ಟೆ ಬಿಚ್ಚಿದಷ್ಟೂ ತೆಳ್ಳಗಾಗುತ್ತೇನೆ.
ಯಾರೂ ಕಣ್ಣು ಮುಚ್ಚಬೇಕಾದ್ದಿಲ್ಲ"

**ಉತ್ತರ : ಕ್ಯಾಬೇಜ್ (ಕೋಸು)**

### ಭಾರತದಲ್ಲಿನ ಉದ್ಯಾನವನಗಳು

ಮಹಾರಾಷ್ಟ್ರದಲ್ಲಿ ಮೂರು ರಾಷ್ಟ್ರೀಯ ಉದ್ಯಾನವನಗಳಿವೆ. ಅವುಗಳೆಂದರೆ ಬೊರಿವಿಲಿ ರಾಷ್ಟ್ರೀಯ ಉದ್ಯಾನವನ, ಫ್ರೆಂಚ್ ರಾಷ್ಟ್ರೀಯ ಉದ್ಯಾನವನ, ಟೊಡೋಬಾ ರಾಷ್ಟ್ರೀಯ ಉದ್ಯಾನವನ

### ಪ್ರಶ್ನೋತ್ತರ

ಪ್ರ : ಭಾರತದ ಪ್ರಥಮ ಪ್ರಜೆ ಯಾರು?
ಉ : ರಾಷ್ಟ್ರಪತಿ
ಪ್ರ : ವಿಶ್ವ ಆಹಾರ ದಿನವನ್ನು ಯಾವ ದಿನಾಂಕ ಆಚರಿಸುತ್ತೇವೆ?
ಉ : 16ನೇ ಅಕ್ಟೋಬರ್
ಪ್ರ: ತಾಜ್‌ಮಹಲ್ ಇರುವುದು ಎಲ್ಲಿ?
ಉ: ಆಗ್ರಾ (ಉತ್ತರ ಪ್ರದೇಶ)

### ಜನರೇಷನ್ ಗ್ಯಾಪ್

4. ಸಮಾಧಾನ, ಮುಂಜಾಗರೂಕತೆಯಿಂದ ನಡೆದುಕೊಳ್ಳುವವರು
5. ಗಂಡ ಹೆಂಡಿರ ನಡುವೆ ಹಲವು ವರ್ಷಗಳ ಅಂತರ ಇರುವವರು
6. ಜೀವನದಲ್ಲಿ ಬದುಕಲು ಅಗತ್ಯವಾದ ವಿದ್ಯಾಭ್ಯಾಸವನ್ನು ಪಡೆದು ವ್ಯವಹಾರ ಜ್ಞಾನ ಹೊಂದಿರುವವರು.
7. ಗೌರವ - ಭಕ್ತಿಯಿಂದ ಕೂಡಿದ ಭಾವನಾತ್ಮಕ ಗುರು - ಶಿಷ್ಯ ಸಂಬಂಧ ಇರುವವರು
8. ವಂಶ ಪಾರಂಪರಿಕ, ಸಾಂಪ್ರದಾಯಿಕ ಉದ್ಯೋಗಗಳನ್ನು ಮಾಡುವವರು.

...........ಮುಂದುವರಿಯುವುದು

### ಸ್ವಲ್ಪ ನಗ್ತೀರಾ ಪ್ಲೀಸ್....?

ಗಂಡ ಹೆಂಡತಿ ಇಬ್ಬರೂ ಇತ್ತೀಚೆಗೆ ಮಹಾಭಾರತ ಸಿನಿಮಾ ನೋಡಿ ಬಂದರು.

**ಗಂಡ:** ನೋಡಿದೆಯಾ ಮಹಾಭಾರತದಲ್ಲಿ ಧರ್ಮರಾಯನು ಜೂಜು ಆಡುತ್ತಿದ್ದ. ಆಂದರೆ ಹಾಗೆ ನಾನು ಜೂಜು ಆಡಿದರೆ ನೀನು ಬೈಯ್ಯುತ್ತೀಯಲ್ಲ?

**ಹೆಂಡತಿ :** ಸರಿ ಹಾಗಾದರೆ ಇನ್ನು ಮೇಲೆ ಜೂಜು ಆಡಿದರೆ ನಾನು ಬಯ್ಯುವುದೇ ಇಲ್ಲ. ಆದರೆ ಒಂದು ಮಾತು ; ದ್ರೌಪದಿಗೆ ಐದು ಮಂದಿ ಗಂಡಂದಿರು ಎಂಬುದನ್ನು ಮರೆಯಬೇಡಿ.

## ಪ್ರಥಮ ಘಟಿಕೋತ್ಸವ

ಮೈಸೂರಿನಲ್ಲಿ 2012ನೇ ಸಾಲಿನಿಂದ 2014ನೇ ಸಾಲಿನವರೆಗೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶ ಪಡೆದು ಯಶಸ್ವಿಯಾಗಿ ಪೂರೈಸಿದ ಅಭ್ಯರ್ಥಿಗಳೆಲ್ಲರಿಗೂ ಘಟಿಕೋತ್ಸವಕ್ಕೆ ಆಹ್ವಾನಿಸಲು ತಯಾರಿಯಾಗುತ್ತಿದ್ದು ಅವರೆಲ್ಲ ಪದವಿ ಪಡೆಯಲು ಅರ್ಹರೆಂದು ತಿಳಿಸುತ್ತಾ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು ಅಕ್ಟೋಬರ್ - ನವೆಂಬರ್ ಮಾಹೆಯಲ್ಲಿ ನಡೆಯಲು ಕ್ರಮಕೈಗೊಳ್ಳಲಾಗಿದೆ ಎಂದು ವಿಶ್ವವಿದ್ಯಾನಿಲಯ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರಥಮ ಘಟಿಕೋತ್ಸವದ ಕಾರ್ಯಕ್ರಮ ಕೂಟ ಹಾಗೂ ಪದವಿ ಸ್ವೀಕರಿಸುವ ವಿದ್ಯಾರ್ಥಿಗಳೆಲ್ಲರಿಗೂ ಮವಿ ಬಳಗ ಶುಭವನ್ನು ಕೋರಿದೆ.

## ನವೋದಯ ಫೌಂಡೇಶನ್‌ನಿಂದ ತರಬೇತಿ

ರಾಷ್ಟ್ರೀಕೃತ ಬ್ಯಾಂಕುಗಳ ಕ್ಲರಿಕಲ್ ಹಾಗೂ ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳಿಗೆ ಐಬಿಪಿಎಸ್ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆಯಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಪರೀಕ್ಷೆಗೆ ತಯಾರಾಗಲು ಮೈಸೂರು ನಗರದ ನವೋದಯ ಫೌಂಡೇಶನ್ ಕಡೆಯಿಂದ ಐದು ದಿವಸಗಳ ಕಾಲ ಉಚಿತವಾಗಿ ತರಬೇತಿಯನ್ನು ನೀಡಲು ಮುಂದೆ ಬಂದಿದೆ.
ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಸಂಸ್ಥೆಯ ಕಛೇರಿಯಲ್ಲಿ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 8 ಗಂಟೆಯೊಳಗೆ ಹೆಸರನ್ನು ನೋಂದಾಯಿಸಲು ಸೂಚಿಸಿದೆ. ಸಂಸ್ಥೆಯ ಕಛೇರಿಯು ಡಿ. ಸುಬ್ಬಯ್ಯ ರಸ್ತೆ, ಎರಡನೇ ಕ್ರಾಸ್, ಸಂಖ್ಯೆ 195, ಚಾಮರಾಜ ಮೊಹಲ್ಲ, ಮೈಸೂರು ಇಲ್ಲಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಪರ್ಕಿಸಿ.

## ಮೈಸೂರು ಸ್ಕೂಲ್ ಆಫ್ ಬ್ಯಾಂಕಿಂಗ್

ಐಬಿಪಿಎಸ್ ನಡೆಸುವ ರಾಷ್ಟ್ರೀಕೃತ ಬ್ಯಾಂಕುಗಳ ಕ್ಲರಿಕಲ್ ಹಾಗೂ ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಮೈಸೂರು ಸ್ಕೂಲ್ ಆಫ್ ಬ್ಯಾಂಕಿಂಗ್ ಪರೀಕ್ಷೆಯ ಬಗ್ಗೆ ತರಬೇತಿಯನ್ನು ನೀಡಲಿದೆ. ಅರ್ಹ ಹಾಗೂ ತರಬೇತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಇನ್ನೂ ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಳ್ಳಲು ಮೊ. ಸಂ. 8123183649ಗೆ ಸಂಪರ್ಕಿಸಬಹುದು.

## ಅರ್ಜಿ ಆಹ್ವಾನ

ನವೆಂಬರ್ ತಿಂಗಳಲ್ಲಿ ನಡೆಯುವ ರಾಜ್ಯಮಟ್ಟದ ಪ್ರಶಸ್ತಿಗೆ ಅರ್ಜಿ ಕರೆಯಲಾಗಿದೆ. ಜಿಲ್ಲೆಯಿಂದ ಒಬ್ಬ ರೈತ ಅಥವಾ ರೈತ ಮಹಿಳೆಗೆ ಕೃಷಿ ಮೇಳದಲ್ಲಿ ಪ್ರಶಸ್ತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ಹಾಗೂ ಅರ್ಜಿ ಸಲ್ಲಿಸಲು ಅಕ್ಟೋಬರ್ 3 ಕೊನೆಯ ದಿವಸ.

### ಹೇಗಿರಬೇಕು?

ಯಾವುದಕ್ಕಾದರೂ ಕಾಯಲೇಬೇಕಾಗಿ ಬಂದಾಗ ತಾಳ್ಮೆಯಿಂದ ಮತ್ತು ಸಮಾಧಾನದಿಂದ ಕಾಯುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಆತಂಕ, ದೈಹಿಕ ಆರೋಗ್ಯವನ್ನು ಮಾತ್ರವಲ್ಲ, ಮಾನಸಿಕ ಆರೋಗ್ಯವನ್ನು ಸಹ ಕೆಡಿಸುತ್ತದೆ. ಅನಿವಾರ್ಯವಾದುದನ್ನು ಸ್ವೀಕರಿಸುವ ಮನೋಧರ್ಮ ಬೆಳೆಸಿಕೊಳ್ಳಬೇಕು.

### ಅನುಪಮಾಗೆ ಪಿಹೆಚ್‌ಡಿ ಪದವಿ

ಡಾ. ಕೆ ಎನ್ ಅಮೃತೇಶ್ ಅವರ ಮಾರ್ಗದರ್ಶನದಲ್ಲಿ ಎಸ್.ಅನುಪಮಾ ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿರುವುದನ್ನು ಅಂಗೀಕರಿಸಿ ಮೈಸೂರು ವಿವಿ ಪಿಹೆಚ್‌ಡಿ ಪದವಿಯನ್ನು ನೀಡಿದೆ.ಅನುಪಮಾರವರ ಕುಟುಂಬ ಹಾಗೂ ಸ್ನೇಹಿತರು ಅಭಿನಂದಿಸಿರುತ್ತಾರೆ.

## ಹೀಗಿದ್ದರೆ ಎಷ್ಟು ಚೆಂದ !!!ನಿಮಗಿಲ್ಲವೆ ಆಸೆ !!!

**ಹಾಗಿದ್ದರೆ ನಿಮ್ಮಲ್ಲಿರುವ ಫೋಟೋ ಕಳುಹಿಸಿಕೊಟ್ಟಲ್ಲಿ ಪ್ರಕಟಿಸಲಾಗುವುದು.**





**ಈ ಪತ್ರಿಕೆಯನ್ನು ಓದಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಪತ್ರಿಕೆಯನ್ನು ಬೆಳೆಸಿ.**

ಈ ಜಾಗ ಓದುಗರಿಗಾಗಿ ಸ್ವಂತ ನಗೆಹನಿ, ಬರಹ, ಚುಟುಕು, ಕವನ ಇತ್ಯಾದಿಗಳನ್ನು ಪ್ರಕಟಿಸಲು ಕಳುಹಿಸಿಕೊಡಿ. ಪ್ರಕಟಿಸಲು ಕೆಲವು ಮಾನದಂಡಗಳನ್ನು ಅಳವಡಿಸಲಾಗಿದೆ. ಪ್ರಕಟಿಸುವ ವಿಚಾರ ಪತ್ರಿಕೆಯ ಮಂಡಳಿಕೆ ಸೇರಿದ್ದಾಗಿರುತ್ತದೆ.

# ನೇಮಕಾತಿ ಅಂಕಣ

## ಅರ್ಜಿ ಆಹ್ವಾನ

ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಿರುದ್ಯೋಗಿ ಅಭ್ಯರ್ಥಿಗಳಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಉಚಿತವಾಗಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ.
ಈ ತರಬೇತಿ ಪಡೆಯಲು ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ/ಡಿಪ್ಲಮೊ/ಬಿ.ಇ. ವಿದ್ಯಾರ್ಹತೆ ಹೊಂದಿದವರಾಗಿರುವ ನಿರುದ್ಯೋಗಿಗಳು ಅರ್ಜಿ ಸಲ್ಲಿಸಬಹುದು. ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕೆಆರ್‌ಎಸ್. ರಸ್ತೆಯಲ್ಲಿರುವ ಕಛೇರಿಯಲ್ಲಿ ಅಥವಾ ಮೊಬೈಲ್ : 9141629598 ನ್ನು ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

### ಕೆಎಸ್‌ಆರ್‌ಪಿಸಿಯಲ್ಲಿ ಉದ್ಯೋಗ

ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ಖಾಲಿ ಇರುವ ವಿಶೇಷ ರಿಸರ್ವ್ ಪೊಲೀಸ್ ಮಹಿಳಾ ಕಾನ್ಸ್ ಸ್ಟೇಬಲ್ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದೆ. ಮಹಿಳೆಯರಿಗಾಗಿ 91 ಹುದ್ದೆಗಳು ಇದ್ದು ಅರ್ಜಿಯನ್ನು ಸಲ್ಲಿಸಲು ಅಕ್ಟೋಬರ್ 6 ರಂದು ಕೊನೆಯ ದಿವಸವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ನೋಡುವುದು.

## ಅರ್ಜಿ ಆಹ್ವಾನ

ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ 2015-16ಸಾಲಿಗೆ ಕಾರ್ಮಿಕರ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ವೈದ್ಯಕೀಯ ವ್ಯಾಸಂಗ ವಿದ್ಯಾರ್ಥಿಗಳು ಸೆಪ್ಟೆಂಬರ್ 30 ರೊಳಗೆ ಅರ್ಜಿಯನ್ನು ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಿದೆ. ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು www.klwb.kar.com ವೆಬ್‌ಸೈಟನಲ್ಲಿ ಪಡೆಯುವುದು.

### ಎಚ್‌ಎಎಲ್ ನಲ್ಲಿ ವಿವಿಧ ಹುದ್ದೆಗಳು

ಎಂಜಿನಿಯರ್ ಸಹಾಯಕ ಸಂಪನ್ಮೂಲ ಅಧಿಕಾರಿ, ಡಿಪ್ಲಮೋ, ಟ್ರೈನಿ, ಬೆರಳಚ್ಚುಗಾರರು ಒಟ್ಟು 36 ಹುದ್ದೆಗಳು ಅಂಗವಿಕಲ ಅಭ್ಯರ್ಥಿಗಳಿಗಾಗಿ ಖಾಲಿಯಿದ್ದು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು 15-10-15 ರಂದು ಕೊನೆಯ ದಿನ. ಹೆಚ್ಚಿನ ವಿವರಗಳನ್ನು www.hal-india.com ವೆಬ್‌ಸೈಟ್‌ನಲ್ಲಿ ಪಡೆಯಬಹುದು.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

## ಗಣೇಶ ಹಬ್ಬದ ಆಚರಣೆ

ನಾಡಿನಾದ್ಯಂತ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಮೈಸೂರು ನಗರದ ನೂರೊಂದು ಗಣಪತಿ ಸರ್ಕಲ್ ಎಲ್ಲಾ ಬಡಾವಣೆಯ ಸರ್ಕಲ್‌ಗಳಲ್ಲಿ ಗಣೇಶನ ಪ್ರತಿಮೆಯನ್ನು ಇಟ್ಟು ಪೂಜಿಸಲಾಯಿತು. ಕೆಲವೆಡೆ 10-15 ದಿವಸಗಳವರೆಗೆ ಪ್ರತಿನಿತ್ಯ ಪೂಜೆ, ಸಂಜೆಯ ವೇಳೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡಿರುತ್ತಾರೆ. ನಗರದ ಎಲ್ಲಾ ಗಣಪತಿ ದೇವಾಲಯಗಳಲ್ಲಿ ಗಣೇಶನ ಪೂಜೆ ಸಡಗರದಿಂದ ಕೂಡಿತ್ತು. ಅಲ್ಲದೆ ಭಕ್ತಾದಿಗಳು ಪೂಜೆ ಪುನಸ್ಕಾರಗಳನ್ನು ನೆರವೇರಿಸಿದರು.





ಬೆಂಗಳೂರಿನ ದೊಡ್ಡಗಣೇಶನ ದೇವಸ್ಥಾನದಲ್ಲಿ ಗಣೇಶನ ಪೂಜೆ ವಿಜೃಂಭಣೆಯಿಂದ ನಡೆಯಿತು. ಎನ್. ಆರ್. ಕಾಲೋನಿಯಲ್ಲಿ ಕಟ್ಟೆ ಬಳಗದಿಂದ ಎಂದಿನಂತೆ ಗಣೇಶನ ಮೂರ್ತಿಯನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಮಲ್ಲೇಶ್ವರಂ, ರಾಜಾಜಿನಗರ, ಮಹಾಲಕ್ಷ್ಮೀ ಲೇಔಟ್, ಜಯನಗರ ಮುಂತಾತ ಎಲ್ಲಾ ಬಡಾವಣೆಗಳಲ್ಲೂ ಯುವಕರು ಗಣೇಶನನ್ನು ಸ್ಥಾಪಿಸಿ ಹಬ್ಬವನ್ನು ಸಡಗರದಿಂದ ಆಚರಿಸಿದರು.

ಮಂಡ್ಯ ನಗರದಲ್ಲಿನ ಗಣೇಶನ ದೇವಾಲಯದಲ್ಲಿ ಹಬ್ಬವು ಜನಜಂಗುಳಿಯಿಂದ ಸೇರಿ ನಡೆಯಿತು. ಅಲ್ಲದೆ ಸಾರ್ವಜನಿಕರ ಪ್ರಮುಖ ರಸ್ತೆಯಲ್ಲಿ ಗಣೇಶನ ಮೂರ್ತಿಯನ್ನು ತಂದು ತಳಿರು ತೋರಣಗಳಿಂದ ಹಾಗೂ ಆಧುನಿಕ ರೀತಿಯಲ್ಲಿ ಅಲಂಕಾರವನ್ನು ಸಹಾ ಮಾಡಿ ಭಕ್ತಾದಿಗಳೊಂದಿಗೆ ಹಬ್ಬವನ್ನು ಆಚರಿಸಿದರು.




ಚಾಮರಾಜನಗರದಲ್ಲೂ ಸಹ ವಿವಿಧ ಬಡಾವಣೆಗಳಲ್ಲಿ ಗಣೇಶನ ಪೂಜೆಯನ್ನು ನಡೆಸಲಾಯಿತು. ಕೆಲವೆಡೆ ಒಂದು ವಾರದ ಕಾಲ ಗಣೇಶನ ಪೂಜೆ ಮಾಡಿ ಹಲವಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಅದೇ ರೀತಿ ಅರಸೀಕೆರೆ, ಚನ್ನಪಟ್ಟಣ, ರಾಮನಗರ, ಕನಕಪುರ, ತುಮಕೂರು, ಕೋಲಾರ ಇತ್ಯಾದಿ ಕಡೆಗಳಲ್ಲಿ ಗಣೇಶನ ಹಬ್ಬವನ್ನು ಸಾರ್ವಜನಿಕರು ಆಚರಿಸಿದ ಬಗ್ಗೆ ವರದಿಗಳು ಬಂದಿವೆ.

ವಿವಿಧ ಗಣಪತಿಯ ವಿಗ್ರಹಗಳನ್ನು ತಂದು ಪೂಜೆ ಮಾಡಿರುವುದನ್ನು ಸಾರ್ವಜನಿಕರು ನೋಡಿ ಆನಂದವನ್ನು ವ್ಯಕ್ತಪಡಿಸಿದರೆಂದು ವರದಿಬಂದಿದೆ.

## ಮಾನಸಿಕ ಒತ್ತಡಕ್ಕೆ ವೈಜ್ಞಾನಿಕ ಪರಿಹಾರ

**ಪೀಠಿಕೆ :** ಮಾನಸಿಕ ಒತ್ತಡ ಎಲ್ಲರಿಗೂ ಇರುತ್ತದೆ. ದಿನವಿಡೀ ಜಂಜಾಟ, ಸಂದಿಗ್ಧತೆ ಹಾಗೂ ಕ್ಲೇಷಗಳು ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತದೆ. ಒಂದು ರೀತಿಯಲ್ಲಿ ಈ ಒತ್ತಡಗಳು ಇಲ್ಲದಿದ್ದಲ್ಲಿ ನಮ್ಮ ದಿನಚರಿಯೇ ವ್ಯತ್ಯಾಸ ಆಗಬಹುದು. ಈ ಒತ್ತಡಗಳು ನಮ್ಮನ್ನು ಶಿಸ್ತಿನತ್ತ ಸಾಗುವಂತೆ ಮಾಡುತ್ತವೆ. ಒತ್ತಡಗಳನ್ನು ಅನುಭವಿಸದ ವ್ಯಕ್ತಿ ಈ ಆಧುನಿಕ ಪ್ರಪಂಚದಲ್ಲಿ ಇರಲು ಸಾಧ್ಯವಿಲ್ಲ.

ಅನೇಕ ವೇಳೆ ನಾವು ಒತ್ತಡ ಹಂಚುವವರ ಮಧ್ಯೆ ಜೀವಿಸುತ್ತೇವೆ. ಗಂಡ ಹೆಂಡತಿಯ ವಿಭಿನ್ನ ವ್ಯಕ್ತಿತ್ವ, ಮಕ್ಕಳ ಶಾಲಾದಿನಚರಿ, ಪರೀಕ್ಷೆಗಳು, ಪೋಷಕ ಅಧ್ಯಾಪಕರ ಭೇಟಿ ಇವೆಲ್ಲಾ ನಮಗೆ ಒತ್ತಡದ ಪರಿಸ್ಥಿತಿಗಳು. ಮನೆ ಕೆಲಸದವಳು ಕಾಲಕ್ಕೆ ಸರಿಯಾಗಿ ಬಾರದಿದ್ದಲ್ಲಿ ಗೃಹಿಣಿಯು ಮಾನಸಿಕ ಸಮತೋಲನವನ್ನು ಕಳೆದುಕೊಂಡು ಪ್ರಯಾಸ ಪಡುತ್ತಾಳೆ.

ಶಾಲೆಯಿಂದ ಮಗು ಸಮಯಕ್ಕೆ ಸರಿಯಾಗಿ ಬಾರದಿದ್ದಲ್ಲಿ ಒಳಗೂ ಹೊರಗೂ ಆಗುವ ರೀತಿಯನ್ನು ನೋಡಿದರೆ ಯಾವುದೇ ಹೆದರಿಕೆ ಆವರಿಸುತ್ತದೆ. ಒಮ್ಮೆ ಶಾಲಾ ವಾಹನ ಮನೆ ಮುಂದೆ ನಿಂತಲ್ಲಿ ಮನಸ್ಸಿಗೆ ನಿರಾಳವಾಗುತ್ತದೆ. ಹೀಗೆ ಒಂದೇ, ಎರಡೇ ಪ್ರತಿನಿತ್ಯ ಹತ್ತಾರು. ಇತ್ತೀಚೆಗೆ ಸಾಫ್ಟ್‌ವೇರ್ ಇಂಜಿನಿಯರ್ ಅವರ ಟೆಲಿಕಾಲ್, ಮೆಸೇಜ್, ಇ-ಮೇಲ್ ಸಹಾ ಮನೆಯವರಿಗೆ ಒಂದು ಟೆನ್ಷನ್

...... ಮುಂದುವರೆಯುವುದು.

## ಮಹಿಳಾ ವಿಶೇಷ ಕನ್ನಡ ವಾರಪತ್ರಿಕೆ

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

### ಚಂದಾ ಕೂಪನ್

ಮಾನ್ಯರೇ,

ಮಹಿಳಾ ವಿಶೇಷ ಪತ್ರಿಕೆಯ 1ವರ್ಷ/ 2 ವರ್ಷ/ 3 ವರ್ಷಯ / 5 ವರ್ಷ/ ಅಜೀವ / ಪೋಷಕ / ಮಹಾ ಪೋಷಕ ಚಂದಾದಾರರಾಗಲು ರೂ................................ ಬ್ಯಾಂಕ್ ಡಿಡಿ ಚೆಕ್ / ಎಂ. ಓ. ಕಳುಹಿಸುತ್ತಿದ್ದೇನೆ. ನನಗೆ ಪ್ರತಿವಾರವೂ ಪತ್ರಿಕೆಯನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

ದಿನಾಂಕ : ಸಹಿ :

### ವಿವರಗಳು

ಹೆಸರು :

ಹುಟ್ಟಿದ ದಿನಾಂಕ :

ವಿದ್ಯಾರ್ಹತೆ :

ವೃತ್ತಿ :

ಮೊ. ಸಂಖ್ಯೆ :

ಇ- ಮೇಲ್ :

ವಿಳಾಸ :

ಪಿನ್‌ಕೋಡ್ :

ಲಗತ್ತಿಸಿರುವ ಬ್ಯಾಂಕ್ ಚೆಕ್/ ಡಿಡಿ ಸಂಖ್ಯೆ..................................................
......................................................... ದಿನಾಂಕ ...........................
ಮಹಿಳಾ ವಿಶೇಷ ಹೆಸರಿನಲ್ಲಿ ಕಳುಹಿಸಿದೆ. ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಿಕೊಡಿ.

### ಚಂದಾ ವಿವರ

ವಾರ್ಷಿಕ ಪತ್ರಿಕೆಗೆ ಚಂದಾ, ಅಂಚೆ ವೆಚ್ಚಕ್ಕಾಗಿ ಹಾಗೂ ಪತ್ರಿಕೆಯ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಈ ಕೆಳಕಂಡಂತೆ ಚಂದಾ ಹಣವನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| 1 ವರ್ಷಕ್ಕೆ | ...... | ರೂ. | 501/- |
| 2 ವರ್ಷಕ್ಕೆ | ...... | ರೂ. | 1,001/- |
| 3 ವರ್ಷಕ್ಕೆ | ...... | ರೂ. | 1,501/- |
| 5 ವರ್ಷಕ್ಕೆ | ...... | ರೂ. | 2,501/- |
| ಆ ಜೀವ ಸದಸ್ಯತ್ವಕ್ಕೆ | ...... | ರೂ. | 5,001/- |
| ಪೋಷಕ ಸದಸ್ಯತ್ವಕ್ಕೆ | ...... | ರೂ. | 10,001/- |
| ಮಹಾಪೋಷಕ ಸದಸ್ಯತ್ವಕ್ಕೆ | ..... | ರೂ. | 25,001/- |

ಪ್ರತಿಮನೆಯಲ್ಲಿ ತಾಯಿ, ಹೆಂಡತಿ, ಹೆಣ್ಣು ಮಕ್ಕಳು, ಅಕ್ಕ, ತಂಗಿ, ಅತ್ತಿಗೆ, ಅತ್ತೆ ಎಲ್ಲರೂ ಅಥವಾ ಯಾರಾದರೂ ಇದ್ದೇ ಇರುತ್ತಾರೆ. ನಿಮಗೆ ಇಷ್ಟ ಬಂದವರ ಹೆಸರಲ್ಲಿ ಪತ್ರಿಕೆ ಅಭಿವೃದ್ದಿಗೆ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದೆ. ಈ ಪತ್ರಿಕೆಯಿಂದ ಒಳ್ಳೆಯ ಮಾಹಿತಿಗಳನ್ನು ಜೀವನದಲ್ಲಿ ಟೆನ್ಷನ್ ಫ್ರೀಯಾಗಿರಲು ವಿಷಯಗಳನ್ನು ನೀಡುವುದೇ ಪತ್ರಿಕೆಯ ಉದ್ದೇಶವಾಗಿದೆ. ಯೋಚಿಸಿ ಒಂದು ಒಳ್ಳೆಯ ನಿರ್ಧಾರಕ್ಕೆ ಬನ್ನಿ. ನಿಮ್ಮ ಬಂಧು, ಬಳಗ, ಸ್ನೇಹಿತರಿಗೆ ತಿಳಿಸಿ. ನೀವು ಹಾಗೂ ಅವರನ್ನು ಚಂದಾದಾರರನ್ನಾಗಿ ಮಾಡಬೇಕೆಂದು ವಿನಂತಿಸಿದೆ.

**"ಇದು ನಿಮ್ಮ ಮಹಿಳಾ ಪತ್ರಿಕೆ. ಪ್ರೋತ್ಸಾಹಿಸಿ, ಬೆಳೆಸಿ."**

### ಅರ್ಧ ತಾಸಿನ ಸಾಕ್ಷ್ಯಚಿತ್ರ

ಕಳಸ ಬಂಡೂರಿ ಯೋಜನೆಗಳ ಬಗ್ಗೆ ಸಾಕಷ್ಟು ಜನರಿಗೆ ಗೊತ್ತಿಲ್ಲ. ಸರಳವಾಗಿ ಹಾಗೂ ಸೂಕ್ಷ್ಮವಾಗಿ ಸಾಕಷ್ಟು ಮಾಹಿತಿಗಳನ್ನು ನೀಡಲಾಗುವುದೆಂದು ಚಿತ್ರನಟಿ ಪೂಜಾಗಾಂಧಿ ತಿಳಿಸಿದ್ದಾರೆ. ಈ ಸಾಕ್ಷ್ಯ ಚಿತ್ರ ಅರ್ಧ ಗಂಟೆಯಾಗಿರುತ್ತದೆ. ಅಲ್ಲದೆ ಇನ್ನು ಒಂದು ತಿಂಗಳೊಳಗೆ ಸಿದ್ದಗೊಳ್ಳಲಿದೆ ಎಂದು ತಿಳಿಸಿದರು. ಇದರಿಂದ ಬಹಳಷ್ಟು ಮಂದಿಗೆ ಮಾಹಿತಿ ದೊರೆವುದು ಸಂತೋಷದ ಸಂಗತಿ.

## ಪ್ರಧಾನಿಗೆ ಸೈನಾರಿಂದ ಉಡುಗೊರೆ



ಪ್ರಧಾನಿ ನರೇಂದ್ರ ಮೋದಿರವರ 64ನೇ ಹುಟ್ಟುಹಬ್ಬದಲ್ಲಿ ದೇಶದ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾರವರು ರಾಕೆಟ್‌ನ್ನು ಪ್ರಧಾನಿಗೆ ಉಡುಗೊರೆಯಾಗಿ ನೀಡಿ ಶುಭವನ್ನು ಕೋರಿದರು.

## ಸಾನಿಯಾಗೆ ಆತ್ಮೀಯ ಸ್ವಾಗತ



ಕಳೆದವಾರ ಅಮೇರಿಕಾದಲ್ಲಿ ನಡೆದ ಯುಎಸ್ ಓಪನ್ ಪ್ರಶಸ್ತಿಯನ್ನು ಗೆದ್ದ ನಂತರ ಸಾನಿಯಾ ಭಾರತಕ್ಕೆ ವಾಪಸ್ಸು ಬಂದಾಗ ಹೈದ್ರಾಬಾದ್‌ನ ವಿಮಾನ ನಿಲ್ದಾಣದಲ್ಲಿ ಅವರ ಕುಟುಂಬವರ್ಗ ಆತ್ಮೀಯ ಸ್ವಾಗತದಿಂದ ಬರಮಾಡಿಕೊಂಡಿತು. ಆ ಸಂದರ್ಭದಲ್ಲಿ ನಾನು ಮಾತ್ರ ಬೇರೆ ವಿಷಯಗಳ ಕಡೆಗೆ ಗಮನ ನೀಡದೆ ಟೆನ್ನಿಸ್ ಆಟದ ಬಗ್ಗೆ ಮಾತ್ರ ಗಮನ ಹರಿಸುತ್ತೇನೆಂದರು. ಪ್ರಶಸ್ತಿ ಪಡೆದಿದ್ದಕ್ಕೆ ಮವಿ ಬಳಗವು ಅಭಿನಂದಿಸಿದೆ.

## ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

55 ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್‌ನ 400ಮೀ. ಓಟದಲ್ಲಿ ಕರ್ನಾಟಕದ ಓಟಗಾರ್ತಿ ಎಂ. ಆರ್. ಪೂವಮ್ಮ ಪ್ರಶಸ್ತಿಯನ್ನು ಗಳಿಸಿದರು. ಇವರು ಸತತವಾಗಿ 5 ನೇ ಬಾರಿ ಪ್ರಶಸ್ತಿ ಪಡೆದಿದ್ದುಹೊಸ ಸಾಧನೆಯ ಮೈಲಿಗಲ್ಲನ್ನು ಸ್ಥಾಪಿಸಿದರು.

## 100ಮೀ. ವಿಭಾಗ

ಈ ಸ್ಪರ್ಧೆಯಲ್ಲಿ ದ್ಯುತಿಚಾಂದ್ 100 ಮೀ. ಓಟವನ್ನು 11.68 ಸೆ. ಗಳಲ್ಲಿ ಗುರಿಮುಟ್ಟಿ ಸ್ವರ್ಣಪದಕವನ್ನು ಪಡೆದರು. ದ್ವಿತೀಯ ಸ್ಥಾನವನ್ನು ಸ್ರಬಾನಿ ನಂದಾ ಪಡೆದರು.

## 300 ಮೀ. ಸ್ಟೀಪಲ್‌ಚೇಸ್

ಈ ವಿಭಾಗದಲ್ಲಿ ಭಾರತದ ಲಲಿತಾ ಬಬರ್‌ರವರು 9:39:83 ಸೆ. ಗಳಲ್ಲಿ ಪೂರ್ಣಗೊಳಿಸಿ ಮೊದಲನೇ ಸ್ಥಾನ ಪಡೆದು ಚಿನ್ನದ ಪದಕಕ್ಕೆ ಭಾಜನರಾದರು. ಇದು ಕೂಟದ ದಾಖಲೆಯಾಗಿದೆ. ರೈಲ್ವೇಸ್‌ನ ಸುಧಾ ಸಿಂಗ್ ಈ ಭಾರಿ ದ್ವಿತೀಯ ಸ್ಥಾನ ಪಡೆದರು.

## ಜಾವಲಿನ್ ಥ್ರೋ ಎಸೆತ

ಅನುರಾಣಿ ಜಾವಲಿನ್ ಥ್ರೋ ಎಸೆತದಲ್ಲಿ ಎಲ್ಲರನ್ನು ಹಿಂದಿಕ್ಕಿ ಚಿನ್ನದ ಪದಕವನ್ನು ಗೆದ್ದುಕೊಂಡರು. ಚಿನ್ನ ಗೆದ್ದ ಅನುರಾಣಿ ಆ ಸಂದರ್ಭದಲ್ಲಿ ಸಂಭ್ರಮವನ್ನು ಗೆಲುವಿನೊಡನೆ ಅತ್ಯುತ್ಸಾಹದಿಂದಿರುವುದು ಕಂಡು ಬಂದಿತು.


**VESTIGE**

ಆಸಕ್ತರು ಸಂಪರ್ಕಿಸಿ.

**ಶ್ರೀ ಎಸ್. ವೆಂಕಟರವಣಪ್ಪ**

**Web: myvestige.com, Mob: 9379664639**



# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**

**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :** ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ, ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :** ಸಂಖ್ಯೆ 734, ನ್ಯೂ ಮಸೀದಿ ರಸ್ತೆ, ಟಿ. ದಾಸರಹಳ್ಳಿ, ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್,** ಸಂಪಾದಕರು **8880334444**

**(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)**


## ಅಭಿನಂದನೆಗಳು

ಈ ಕೆಳಗೆ ತಿಳಿಸಿರುವ ಮಹಿಳಾ ಸಂಘಗಳು ನಮ್ಮ ಪತ್ರಿಕೆಯ ವಾರ್ಷಿಕ ಸದಸ್ಯತ್ವವನ್ನು ಪಡೆದಿರುವುದಕ್ಕೆ ಮಹಿಳಾ ವಿಶೇಷ ಬಳಗವು ಅಭಿನಂದನೆಯನ್ನು ಸಲ್ಲಿಸಿದೆ.

ಅಧ್ಯಕ್ಷರು : ತುಳಸಿ ಉಪಾಧ್ಯಕ್ಷರು: ಪ್ರಿಯಾಂಕ

ಕಾರ್ಯದರ್ಶಿ : ನಳಿನಿ

**ಶ್ರೀ ಭಗೀರಥಿ ಮಹಿಳಾ ಸಂಘ**

ಕೆ.ಜಿ.ಹಳ್ಳಿ, ಬೆಂಗಳೂರು

ಅಧ್ಯಕ್ಷರು : ರಾಜಮ್ಮ ಉಪಾಧ್ಯಕ್ಷರು: ಚಿಕ್ಕಮ್ಮ

ಕಾರ್ಯದರ್ಶಿ : ಲಕ್ಷ್ಮೀದೇವಿ

**ಶ್ರೀ ಪಾರ್ವತಿ ಮಹಿಳಾ ಸಂಘ**

ಚಿಕ್ಕಬಾಣಾವರ. ಬೆಂಗಳೂರು

ಅಧ್ಯಕ್ಷರು : ಶಾಲಿನಿ ಉಪಾಧ್ಯಕ್ಷರು: ಕವಿತಾ

ಕಾರ್ಯದರ್ಶಿ : ಪ್ರೇಮ

**ಶ್ರೀಜ್ಞಾನೇಶ್ವರಿ ಮಹಿಳಾ ಸಂಘ**

ಪೀಣ್ಯಾ, ಬೆಂಗಳೂರು

ಅಧ್ಯಕ್ಷರು : ತಾಯಮ್ಮ ಉಪಾಧ್ಯಕ್ಷರು: ಜಾನಕಿ

ಕಾರ್ಯದರ್ಶಿ : ಶ್ವೇತಾ

**ಶ್ರೀ ಗಜಗೌರಿ ಮಹಿಳಾ ಸಂಘ**

ಕೆ.ಎಂ. ದೊಡ್ಡಿ, ಮಂಡ್ಯ ಜಿಲ್ಲೆ.

ಅಧ್ಯಕ್ಷರು : ರಾಧಾ ಉಪಾಧ್ಯಕ್ಷರು: ಕುಮಾರಿ

ಕಾರ್ಯದರ್ಶಿ : ಜಲಜ

**ಶ್ರೀ ಲಕ್ಷ್ಮಿ ಮಹಿಳಾ ಸಂಘ**

ಟಿ. ದಾಸರಹಳ್ಳಿ, ಬೆಂಗಳೂರು.

ಅಧ್ಯಕ್ಷರು : ಶೋಭಾರಾಣಿ ಉಪಾಧ್ಯಕ್ಷರು: ಲಲಿತಾ ಮೋಹನ್

ಕಾರ್ಯದರ್ಶಿ : ಸಂಗೀತಾ ಮೂರ್ತಿ

**ಶ್ರೀ ಶಾರದಾ ಮಹಿಳಾ ಸಂಘ**

# 98, 3 ನೇ ಕ್ರಾಸ್, ವಾಟರ್ ಟ್ಯಾಂಕ್ ರಸ್ತೆ, ಚಂದಾಪುರ, ಬೆಂಗಳೂರು.

ಅಧ್ಯಕ್ಷರು : ನಳಿನಿ ಉಪಾಧ್ಯಕ್ಷರು: ಸಾಕಮ್ಮ

ಕಾರ್ಯದರ್ಶಿ: ಜಗದಾಂಭ

**ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಸಂಘ**

# 318, ಕಾಲೇಜು ರಸ್ತೆ, ಕಿಕ್ಕೇರಿ ಮಂಡ್ಯ ಜಿಲ್ಲೆ.


**ಶ್ರೀಲಕ್ಷ್ಮಿ ಮಹಿಳಾ ತರಬೇತಿ ಸಂಸ್ಥೆ**

ಯುವತಿಯರಿಗಾಗಿ ಟೈಲರಿಂಗ್ ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ಕೋರ್ಸ್, ಕಸೂತಿ ಕೆಲಸ, ಮೆಹಂದಿ ಕೋರ್ಸ್‌ಗಳಿಗೆ ಸಂಪರ್ಕಿಸಿ. ಮೊ: **9611066634.**

**ಧರಣಿ ಮಾತಾಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ)**

- ಮುಡಾದಿಂದ ಅಂಗೀಕೃತವಾದ ಲೇ ಔಟ್
- ಖಾಲಿ ನಿವೇಶನಗಳು ರೂ. **900** ಚ. ಅಡಿಗೆ
- ಲಲಿತಾದ್ರಿಪುರ
- ರಿಂಗ್‌ರೋಡ್‌ಗೆ **800** ಮೀ. ಹತ್ತಿರವಿದೆ.

ಆಸಕ್ತರು ಸಂಪರ್ಕಿಸಿ.

ಅಧ್ಯಕ್ಷರು : **ಮೋಹನ್ ಎನ್.** ಮೊ : **7259740127**

**# 623,** ಶಂಕರ ಮಠದ ಹಿಂಭಾಗದ ರಸ್ತೆ,ಚಾಮರಾಜಮೊಹಲ್ಲಾ, ಮೈಸೂರು - **24.**

ಇ- ಮೇಲ್ : **vinayasimha1970@gmail.com**


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16